# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

**ಎಸ್.ಸಿ. ಸಂಖ್ಯೆ 369/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಹೆಚ್ ಕೆ ರಾಜು | ಪಿಡಬ್ಲ್ಯೂ ಃ 3 |
| ತಂದೆಯ / ಗಂಡನ ಹೆಸರು | : ಲೇಃ ಕೆಂಪಯ್ಯ | ಸಿಡಬ್ಲ್ಯೂ ಃ 4 |
| ವಯಸ್ಸು | : 69 ವರ್ಷ | |
| ಉದ್ಯೋಗ | : ವ್ಯಾಪಾರ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 25.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾ,ಸಾ. 5 ಗೊತ್ತು. ಆತ ಕೇರಳದವನು. ಮೈಸೂರಿನ ರಾಜ ಕುಮಾರ್ ರಸ್ತೆಯಲ್ಲಿ ನನಗೆ "ರಘುರಾಮ್ ಆರ್ಕೆಡ್ " ಎಂಬ ಹೆಸರಿನಡಿಯಲ್ಲಿ ಒಂದು ಕಟ್ಟಡ ಇರುತ್ತದೆ. ಆ ಕಟ್ಟಡವನ್ನು ಕಟ್ಟಿದ ನಂತರ ಚಾ,ಸಾ. 5 ರವರಿಗೆ ಅದನ್ನು ಬಾಡಿಗೆಗೆ ನೀಡಿದೆ. 2017 ರಲ್ಲಿ ಬಾಡಿಗೆಗೆ ಕರಾರು ಆಗಿತ್ತು. ಸದರಿ ಬಾಡಿಗೆ ಕರಾರಿನ ಜೆರಾಕ್ಸ್ ಪ್ರತಿಯನ್ನು ಈಗ ನೋಡುತ್ತಿದ್ದೇನೆ. ಸದರಿ ಕಟ್ಟಡದಲ್ಲಿ 4 ಅಂತಸ್ತುಗಳಿವೆ. ಒಟ್ಟು 20 ರೂಂಗಳಿವೆ. 2019 ರಲ್ಲಿ ಚಾ,ಸಾ. 5 ರವರಿಂದ ತೊಂದರೆಯಾದಾಗ , ಅವರಿಂದ ಬೀಗದ ಕೀಯನ್ನು ಪಡೆದು ಖಾಲಿ ಮಾಡಿಸಿದೆವು. ಈಗ ಬೇರೆಯವರು ಈ ಕಟ್ಟಡದಲ್ಲಿ ಬಾಡಿಗೆಗಾಗಿ ಇದ್ದಾರೆ. ಪೋಲೀಸರು ನಮ್ಮ ಕಟ್ಟಡದ ಮೇಲೆ ದಾಳಿ ನಡೆಸಿದ 3 ದಿನಗಳ ನಂತರ ನಜರ್ ಬಾದ್

ಪೋಲೀಸರು ನನ್ನನ್ನು ಕರೆಯಿಸಿ ಚಾ,ಸಾ. 5 ಬಾಡಿಗೆ ಪಡೆದಿದ್ದ ಕಟ್ಟಡದ ರೂಂಗಳಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂದು ತಿಳಿಸಿದರು ಮತ್ತು ನನ್ನ ಹೇಳಿಕೆಯನ್ನು ಪಡೆದುಕೊಂಡರು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

2. ಚಾ,ಸಾ. 5 ರವರು ಆ ರೂಂಗಳನ್ನು ಬೇರೆಯವರಿಗೆ ಬಾಡಿಗೆಗಾಗಿ ಅಥವಾ ಭೋಗ್ಯಕ್ಕಾಗಿ ನೀಡಿರಲಿಲ್ಲ. 2 ಅಂತಸ್ತುಗಳಲ್ಲಿ ಇದ್ದ ರೂಂಗಳನ್ನು ಚಾ,ಸಾ. 5 ರವರಿಗೆ ಬಾಡಿಗೆಗಾಗಿ ಕೊಟ್ಟಿದ್ದೆ. ಉಳಿದ 2 ಅಂತಸ್ತುಗಳಲ್ಲಿನ ರೂಂಗಳನ್ನು ಬೇರೆಯವರಿಗೆ ಬಾಡಿಗೆಗಾಗಿ ಕೊಟ್ಟಿದ್ದೆ. ಚಾ,ಸಾ. 5 ರವರು ಕೇರಳಾದವರು. ಚಾ,ಸಾ. 5 ರವರು ಬಾಡಿಗೆಗೆ ಪಡೆದಿದ್ದ ರೂಂಗಳಲ್ಲಿ ಯಾವುದೇ ವೇಶ್ಯಾವಾಟಿಕೆ ನಡೆಯುತ್ತಿರಲಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಉಳಿದ 2 ಅಂತಸ್ತುಗಳಲ್ಲಿನ ರೂಂಗಳನ್ನು ಬಾಡಿಗೆಗೆ ಪಡೆದಿದ್ದವರು ವೇಶ್ಯಾವಾಟಿಕೆ ನಡೆಸುತ್ತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಮೇಲೆ ಹೇಳಿದಂತೆ ಹೇಳಿಕೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.